ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಸಂ: ಅಪರಾಧ-2/73/ಹಿ.ಅ/2013

ಮಹಾ ನಿರ್ದೇಶಕರು ಮತ್ತು
ಆರಕ್ಷಕ ಮಹಾ ನಿರೀಕ್ಷಕರವರ ಕಛೇರಿ
ನೃಪತುಂಗ ರಸ್ತೆ, ಬೆಂಗಳೂರು
ದಿ:21-06-2013

**ಅತಿ ಜರೂರು**

**ಸುತ್ತೋಲೆ**

ವಿಷಯ: ಪ್ರಕರಣ ಹಾಗೂ ಪ್ರತಿ ಪ್ರಕರಣಗಳ ತನಿಖೆ ಹಾಗು ಅಂತಿಮ ವರದಿ ಸಲ್ಲಿಸುವಾಗ ಕರ್ನಾಟಕ ಉಚ್ಚ ನ್ಯಾಯಾಲಯ ಹಾಗು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳ ಪಾಲನೆ ಬಗ್ಗೆ.

ಉಲ್ಲೇಖ: ಸಹಾಯಕ ಸರಕಾರಿ ಅಭಿಯೋಜಕರು, ಎರಡನೇ ಅಪರ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಧಾರವಾಡ ರವರ ಪತ್ರ ದಿನಾಂಕ 1-4-2013

* * *

ಪ್ರಕರಣ ಹಾಗೂ ಪ್ರತಿ ಪ್ರಕರಣಗಳ ತನಿಖೆ ಹಾಗು ಅಂತಿಮ ವರದಿ ಸಲ್ಲಿಸುವಾಗ ಕರ್ನಾಟಕ ಉಚ್ಚ ನ್ಯಾಯಾಲಯ ಹಾಗು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳ ಪಾಲನೆ ಮಾಡುವ ಬಗ್ಗೆ ಸಹಾಯಕ ಸರಕಾರಿ ಅಭಿಯೋಜಕರು, ಎರಡನೇ ಅಪರ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಧಾರವಾಡ ರವರು ಈ ಕಛೇರಿಗೆ ಬರೆದ ಪತ್ರದಲ್ಲಿನ ಅಂಶಗಳನ್ನು ಪರಿಗಣಿಸಿ, ಕಟ್ಟುನಿಟ್ಟಿನ ಪಾಲನೆಗಾಗಿ ಈ ಸುತ್ತೋಲೆಯನ್ನು ಹೊರಡಿಸಲಾಗಿದೆ.

- ಒಬ್ಬನೇ ತನಿಖಾಧಿಕಾರಿಯು ಎರಡು ಪ್ರಕರಣಗಳ ತನಿಖೆಯನ್ನು ಕೈಗೊಳ್ಳಬೇಕು.
- ಅಂತಿಮ ವರದಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸುವಾಗ ಮೊದಲ ಪ್ರಕರಣದಲ್ಲಿ ಪ್ರತಿ ಪ್ರಕರಣವಿರುವ ಬಗ್ಗೆ ಕಾಣುವಂತೆ ಟಿಪ್ಪಣಿ ಹಾಕಿ ಪ್ರತಿ ಪ್ರಕರಣದ ಪ್ರಥಮ ಮಾಹಿತಿ ವರದಿ, ದೂರು, ಒಳಗೊಂಡ ಸಂಬಂಧಿಸಿದ ದಾಖಲೆಗಳ ಧೃಡೀಕೃತ ಪ್ರತಿಗಳನ್ನು ಲಗತ್ತಿಸಬೇಕು. ಇದೇ ರೀತಿ ಪ್ರತಿ ಪ್ರಕರಣದ ಅಂತಿಮ ವರದಿಯಲ್ಲಿ ಇದು ಪ್ರತಿ ಪ್ರಕರಣವಿದ್ದು ಮೊದಲ ಪ್ರಕರಣದ ಬಗ್ಗೆ ಕಾಣುವಂತೆ ಟಿಪ್ಪಣಿ ಹಾಕಿ ಮೊದಲ ಪ್ರಕರಣದ ಪ್ರಥಮ ಮಾಹಿತಿ ವರದಿ, ದೂರು, ಒಳಗೊಂಡ ಸಂಬಂಧಿಸಿದ ದಾಖಲೆಗಳ ಧೃಡೀಕೃತ ಪ್ರತಿಗಳನ್ನು ಲಗತ್ತಿಸಬೇಕು.
- ಸದರಿ ಅಂತಿಮ ವರದಿಗಳಲ್ಲಿ ತನಿಖಾಧಿಕಾರಿಯು ಸದರಿ ಘಟನೆಗೆ ಮೂಲ ಕಾರಣ ತಿಳಿಸುತ್ತಾ ತನಗೆ ಇದು ವ್ಯಕ್ತಿ/ ಗುಂಪಿನ ನಡುವೆ ನೋಟಕರು ಸೇರಿಕೊಳ್ಳುವ ಹೊಡೆದಾಟದ ಬಗ್ಗೆ ಹಾಗು ಅವರಲ್ಲಿ ದಾಳಿಕಾರ/ ರಕ್ಷಣಾತ್ಮಕ ದಾಳಿ ಕೈಗೊಂಡವರ ಬಗ್ಗೆ ತಿಳಿಸಿ ಯಾರಿಗೆ ಹೇಗೆ? ಯಾವ ಕಾರಣಕ್ಕೆ ಗಾಯಗಳುಂಟಾದವು? ಎಂಬುದನ್ನು ಸ್ಪಷ್ಟ ಅಭಿಪ್ರಾಯದೊಂದಿಗೆ ಅಂತಿಮ ವರದಿಗಳನ್ನು ಸಲ್ಲಿಸಬೇಕು.

Scanned by CamScanner

❖ ಇದೇ ರೀತಿ ಪ್ರಕರಣ ಹಾಗು ಪ್ರತಿ ಪ್ರಕರಣಗಳ ಅಂತಿಮ ವರದಿಗಳನ್ನು ಸದರಿ ನ್ಯಾಯಾಲಯಗಳ ನಿರ್ದೇಶನ ಪಾಲನೆಯಾದ ಕುರಿತಂತೆ ಕಂಡುಕೊಳ್ಳಲು ಪರೀಶೀಲನೆಗೆ ಒಬ್ಬನೇ ಅಭಿಯೋಜಕರಿಗೆ ನೀಡಿ ನಂತರ ನ್ಯಾಯಾಲಯಗಳಿಗೆ ಸಲ್ಲಿಸುವುದು.

ಮೇಲಿನ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ತಮ್ಮ ತಮ್ಮ ಅಧೀನದಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ತಾಕೀತು ಮಾಡತಕ್ಕದ್ದು ಮತ್ತು ಅನುಪಾಲನಾ ವರದಿಯನ್ನು ಪಡೆಯತಕ್ಕದು.

24/6/13

ಮಹಾ ನಿರ್ದೇಶಕರು ಮತ್ತು ಆರಕ್ಷಕ
ಮಹಾ ನಿರೀಕ್ಷಕರವರ ಪರವಾಗಿ

ಪೋಲೀಸ್ ಕಮೀಷನರ್, ಬೆಂಗಳೂರು ನಗರ/ಮೈಸೂರು ನಗರ/ಹುಬ್ಬಳ್ಳಿ-ಧಾರವಾಡ/ ಮಂಗಳೂರು ನಗರ.
ಎಲ್ಲಾ ಪೋಲೀಸ್ ಮಹಾನಿರೀಕ್ಷಕರುಗಳು
ಎಲ್ಲಾ ಪೋಲೀಸ್ ಅಧೀಕ್ಷಕರುಗಳು, ಕಜಿಎಫ್ ಮತ್ತು ರೈಲ್ವೇಸ್ ಸೇರಿದಂತೆ

<u>ಮಾಹಿತಿಗಾಗಿ</u>

ಸರಕಾರಿ ಅಭಿಯೋಜಕರ ಕಛೇರಿ, ಮೂರನೇ ಅಪರ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಧಾರವಾಡ

DGP CONTROL ROOM
Office of the DG & IGP
Karnataka State
Date 24/6/13
Signature

Scanned by CamScanner